# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**.227/2015

**DW**:1

**ದಿನಾಂಕ 07.07.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಸ್.ಜಿ.ಎಚ್. ವಕೀಲರಿಂದ:**

1971 ನೇ ಇಸವಿಯಲ್ಲಿ ನಾನು ಮೊದಲು ಒಂದು ವಾಟ್ನಿ ಕುರಿತು ದಾವೆ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾವೆಯನ್ನು ನಾನು ಮಹಮ್ಮದಸಾಬ ಮಲ್ಲೀಕಸಾಬ ವಾಲೀಕರ ಮತ್ತು ಉಸ್ಮಾನಸಾಬ ಮಲ್ಲೀಕಸಾಬ ವಾಲೀಕರ ಇವರ ವಿರುದ್ಧ ಮಾಡಿರುತ್ತೇನೆ. ಸರ್ವೆ ನಂ.30, 55 ಮತ್ತು 1 ರ ಮೇಲೆ ಸದರಿ ದಾವೆಯನ್ನು ಮಾಡಿದ್ದೇನು. ನಾನು ಆ ದಾವೆಯಲ್ಲಿ ದಾಖಲೆಗಳನ್ನು ಕೊಟ್ಟಿರುತ್ತೇನೆ ಆದರೆ ಈಗ ನನಗೆ ನೆನಪಿಲ್ಲ. ನಾನು ಸರ್ವೆ ನಂ.1, 30 ಮತ್ತು 55 ರ ಪಹಣಿ ಪತ್ರಿಕೆಗಳನ್ನು ಆ ದಾವೆಯಲ್ಲಿ ಕೊಟ್ಟಿದ್ದೇನು ಎಂದರೆ ಸರಿ. ಸದರಿ ಪಹಣಿ ಪತ್ರಿಕೆಗಳನ್ನು ಬಿಟ್ಟು ಬೇರೆ ದಾಖಲೆಗಳನ್ನು ಆ ದಾವೆಯಲ್ಲಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನೀಡಿದ 3 ಸರ್ವೆ ನಂಬರನ ಪಹಣಿ ಪತ್ರಿಕೆಗಳು ಮಹಮ್ಮದಸಾಬ ಮಲೀಕಸಾಬ ವಾಲೀಕರ ಇವನ ಹೆಸರಿನಲ್ಲಿ ಇದ್ದವು. ಲಾಡ್ಲೇಸಾಬ ಈತನಿಂದ ಸದರಿ ಈ ಮೇಲೆ ಹೇಳಿದ 3 ಆಸ್ತಿಗಳು ಬಂದಿರುತ್ತವೆ ಎಂದು ತೋರಿಸಲು ನಾನು ಆ ದಾವೆಯಲ್ಲಿ ದಾಖಲೆಗಳನ್ನು ದಾಖಲು ಮಾಡಿಲ್ಲ ಎಂದರೆ ಸರಿಯಲ್ಲ. ಲಾಡ್ಲೇಸಾಬ ಇವರಿಗೆ ಇಬ್ಬರು ಮಕ್ಕಳು ಎಂದರೆ ಸರಿ. ಲಾಡ್ಲೇಸಾಬ ಇವರ ಕುಟುಂಬಕ್ಕೆ ಸಂಬಂಧಿಸಿದಂತೆ ಪಡೀತರ ಚೀಟಿಯನ್ನು ಆ ದಾವೆಯಲ್ಲಿ ಹಾಜರುಮಾಡಿಲ್ಲ ಎಂದರೆ ಸರಿಯಲ್ಲ. ನಾನು ಲಾಡ್ಲೇಸಾಬ ಇವರನ್ನು ನೋಡಿಲ್ಲ. ಅವರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಉಸ್ಮಾನಸಾಬ ಇವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೊದಲು ಲಾಡ್ಲೇಸಾಬ ಮರಣ ಹೊಂದಿದ್ದು ಆ ನಂತರ ಉಸ್ಮಾನಸಾಬ ಮರಣ ಹೊಂದಿರುತ್ತಾನೆ. ಉಸ್ಮಾನಸಾಬನನ್ನು ನಾನು ನೋಡಿಲ್ಲ. ಲಾಡ್ಲೇಸಾಬ ಮತ್ತು ಉಸ್ಮಾನಸಾಬ ಇವರು ಮರಣ ಹೊಂದಿರುವುದನ್ನು ನನ್ನ ತಂದೆಯವರು ಹೇಳಿರುತ್ತಾರೆ. ಸದರಿಯವರು ಮರಣ ಹೊಂದಿರುವ ಬಗ್ಗೆ ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ಸದರಿ ಉಸ್ಮಾನಸಾಬ ಮತ್ತು ಲಾಡ್ಲೇಸಾಬ ಇವರ ಮರಣ ದಾಖಲೆಯನ್ನು ಆ ದಾವೆಯಲ್ಲಿ

ಹಾಜರುಮಾಡಿಲ್ಲ. ಮಲೀಕಸಾಬ ಇವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಮಹಮ್ಮದಸಾಬ ಮಲೀಕಸಾಬ ವಾಲೀಕರ ಇವರಿಗೂ ಮತ್ತು ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. 1971 ರ ದಾವೆಯಲ್ಲಿ ಮಹಮ್ಮದಸಾಬ ಪರ ಎ.ಬಿ.ಪಾಟೀಲ ವಕೀಲರು ಹಾಜರಾಗಿದ್ದರು ಎಂದರೆ ಸರಿ. ಸದರಿ ಮಹಮ್ಮದಸಾಬ ಈತನಿಗೆ ನ್ಯಾಯಾಲಯಕ್ಕೆ ಹೋಗಬೇಡ ಎಂದು ಆ ದಾವೆಯಲ್ಲಿ ನಾವು ಅಂಜಿಕೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ದಿಃ25.09.1972 ರಂದು ಎ.ಬಿ.ಪಾಟೀಲ ವಕೀಲರು ಮಹಮ್ಮದಸಾಬ ಈತನು ಮಾಹಿತಿಯನ್ನು ನೀಡಿರುವುದಿಲ್ಲ ಆದ ಕಾರಣ ಈ ಮೇಲೆ ಹೇಳಿದ ದಾವೆಯಿಂದ ನಿವೃತ್ತಿಯಾಗುತ್ತೇನೆ ಎಂದು ಮೆಮೊ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಕೀಲರು ನಿವೃತ್ತಿಯಾದ ನಂತರ ಮಹಮ್ಮದಸಾಬ ಈತನಿಗೆ ನ್ಯಾಯಾಲಯದಿಂದ ನೋಟಿಸ್ ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನೊಬ್ಬನೇ ಸಾಕ್ಷ್ಯಾ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿ ಸಾಕ್ಷಿ ಮಾಡಿಕೊಂಡಿರುತ್ತೇನೆ ಎಂದರೆ ನನಗೆ ಈಗ ನೆನಪಿಲ್ಲ. ಲಾಡ್ಲೇಸಾಬ ಈತನಿಗೆ ಇಬ್ಬರು ಮಕ್ಕಳು ಮತ್ತು ನಾವು ಉಸ್ಮಾನಸಾಬ ಇವರ ಮೊಮ್ಮಕ್ಕಳು ಎಂದು ತೋರಿಸಲು ಆ ದಾವೆಯಲ್ಲಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ನೆನಪಿಲ್ಲ. ಎ.ಬಿ.ಪಾಟೀಲ ವಕೀಲರು ನಿವೃತ್ತಿಯಾದ 12 ದಿನದಲ್ಲಿ ನಾವು ನ್ಯಾಯಾಲಯಕ್ಕೆ ಸುಳ್ಳು ಹೇಳಿ 1971 ರ ದಾವೆಯಲ್ಲಿ ಸುಳ್ಳು ಡಿಕ್ರಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮಹಮ್ಮದಸಾಬ ಈತನು ಗ್ರಾಮಸೇವಕ ಎಂದು ಮಾಡುತ್ತಿದ್ದನು ಎಂದರೆ ಸಾಕ್ಷಿಯು ನಮ್ಮ ತಂದೆಯವರು ಸಹ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ತಂದೆಯು ಗ್ರಾಮ ಸೇವಕ ಎಂದು ಮಾಡುತ್ತಿದ್ದರು ಎಂದು ತೋರಿಸಲು ನಾನು ಆ ದಾವೆಯಲ್ಲಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. 1971 ರ ದಾವೆಯಲ್ಲಿ ನಮ್ಮ ತಂದೆಯು ಗ್ರಾಮ ಸೇವಕ ಎಂದು ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಮಾಡಿರುತ್ತೀರಿ ಎಂದು ಬರೆದಿರುತ್ತೀರಿ ಎಂದರೆ ಸಾಕ್ಷಿಯು ನಾವು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಸರ್ವೆ ನಂ.33 ಇದನ್ನು ಮಹಮ್ಮದಸಾಬ ಈತನಿಗೆ ಸರ್ಕಾರದವರು ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಏಕತ್ರ ಕುಟುಂಬಕ್ಕೆ ಮಂಜೂರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.1 ಮತ್ತು 55 ಇವು ಮಹಮ್ಮದಸಾಬ ಈತನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೆ ನಂ.1, 33 ಮತ್ತು 55



ರಲ್ಲಿ ನನಗಾಗಲಿ, ಮೃತ 1 ನೇ ಪ್ರತಿವಾದಿಗಾಗಲಿ ಮತ್ತು ಉಳಿದ ಪ್ರತಿವಾದಿಯರಿಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂ.120/1971 ರಲ್ಲಿ ನಾವು ನ್ಯಾಯಾಲಯಕ್ಕೆ ಸುಳ್ಳು ಹೇಳಿ ಮೋಸದಿಂದ ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಸಲು ದಾವಾ

ನಂ.120/1971 ರಂತೆ ನನಗೆ ಯಾವುದೇ ಪಾಲನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಅಪ್ಪನ ಹಕ್ಕನ್ನು ಇಟ್ಟಿಲ್ಲವೆಂದು ನುಡಿಯುತ್ತಾರೆ. ಸದರಿ ದಾವೆಯನ್ನು ಬಿಟ್ಟು ಬೇರೆ ದಾವೆಯನ್ನು ಯಾರು ಮಾಡಿರುವುದಿಲ್ಲ. ಪ್ಯಾರಾ ನಂ.10 ನನ್ನ ಲಿಖಿತ ಹೇಳಿಕೆಯಲ್ಲಿ ಅಸಲು ದಾವಾ ನಂ.410/1984 ನ್ನು ಮಾಡಿರುತ್ತಾರೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. 1971 ರ ದಾವೆಯ ಮೇಲೆ ನಾನು ಕಬ್ಜಾ ಕೊಡಿಸುವಂತೆ ಒಂದು ದಾವೆಯನ್ನು ಮಾಡಿದ್ದು ಅದು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಅದು FDP 01/2010 ಎಂದು ಇರುತ್ತದೆ ಎಂದರೆ ಸರಿ. ನಾನು ಸುಳ್ಳು ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲದೇ ಇದ್ದರು ಸಹ ಸುಳ್ಳು ಹೇಳಿ ದಾವಾ ಆಸ್ತಿ ನಂ.120/1971 ರಲ್ಲಿ ಸುಳ್ಳು ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.